ಮಾರಾಯ್ತೀ, ತಮಾಷಿ ಮಾಡ್ತಿದೀಯಾ?" ಕೇಳಿದ್ದ ನಾಗರಾಜ.

"ತಮಾಷಿ ಎಂತಕ್ಕೆ? ನಿನ್ನ ಮಗೂನ ಕೂದಲು ಕೊಂಕದ ಹಾಗೆ ಸಾಕಿದ್ರೆ ಸೈಯಲ್ವಾ? ನನ್ನ ಹತ್ರ ಬೆಳೆದ್ರೇನು, ನಿನ್ನ ಹತ್ರ ಬೆಳೆದ್ರೇನು?"

ಸ್ಕೂಲಿಗೆ ಹೋಗುತ್ತಿದ್ದಾಗ ಒಂದೇ ಬಳಪದ ಕಡ್ಡಿಯನ್ನು ಎರಡು ತುಂಡು ಮಾಡಿಕೊಂಡು ಇಬ್ಬರೂ ಉಪಯೋಗಿಸುತ್ತಿದ್ದಷ್ಟು ಸಲೀಸಾ? ಏನೋ ತಮಾಷಿಗೆ ಹೇಳಿದ್ದನ್ನು ಇವಳು ಇಷ್ಟು ಗಂಭೀರವಾಗಿ ಪರಿಗಣಿಸಿದಳಾ?

"ಜಾಸ್ತಿ ದಿನ ಇರೋಕಾಗಲ್ಲ ನಂಗೆ. ನಾಳೆ, ನಾಡಿದ್ದಿನ ಹಾಗೆ ಹೊರಟುಬಿಡ್ಬೇಕು. 'ಕಾರು ಮಾಡ್ಕಂಡು ಬಾ. ನಾಗಣ್ಣ ಗೊತ್ತು ಮಾಡಿಕೊಡ್ತಾನೆ' ಅಂದಿದಾಳೆ ಅಮ್ಮ."

"ಬಾಡಿಗೆ ಕಾರಿಗೆ ಬರಗಾಲಾನಾ? ಗುರ್ತಿನೋರೇ ಇದಾರೆ. ಮಾಡ್ಕೊಡ್ತೀನಿ ಬಿಡು..."

"ಸಣ್ಣಕ್ಕಿದ್ದಾಗ್಍ಲೇ ಕರ್ಕೊಂಡ್ಹೋದ್ರೆ ಮಗೂಗೆ ಹೊಂದ್ಕಳ್ಳೋಕೆ ಸುಲಭ ಆಗುತ್ತೆ. ಇಲ್ಲಿಗೂ ಆಗ ಈಗ ಕರ್ಕೊಂಡ್ಬರ್ತಿದ್ರೆ ನಿಮ್ಮ ಮೇಲೂ ನಂಟು ಬೆಳೆಯುತ್ತೆ..."

'ಇವಳಿಗೇನು ಹುಚ್ಚಾ?' ಎನ್ನುವಂತೆ ಅವಳ ಮುಖ ದಿಟ್ಟಿಸಿದ್ದ ನಾಗರಾಜ. ಅವಳು ಕೇಳಿದ ಮಾತಿಗೆ ಯಾವತ್ತೂ ಒಲ್ಲೆ ಅನ್ನದವನು ಇದನ್ನೂ ನೆರವೇರಿಸಿಕೊಡುತ್ತಾನೆ ಎನ್ನುವ ನಂಬಿಕೆ, ವಿಶ್ವಾಸ. ಮೊದಲುಮುಂಚೆ ನಿರಾಕರಣೆಯ ಮಾತಾಡಿದ್ದು ಸೀತೆ,

"ಕೊಡೋರು, ತಗೊಳ್ಳೋರು ಇಬ್ರೂ ರೆಡಿ ಇರ್ಬೋದು. ಮಧ್ಯ ನಾನೊಬ್ಳಿದೀನೆ, ನೆನಪುಂಟಲ್ವಾ? ನಾನು ಹೊತ್ತು ಹೆತ್ತಿದ್ದನ್ನು ಯಾರಿಗೂ ದತ್ತು ಕೊಡಲ್ಲ ನಾನು. ನನ್ನ ಮಗು ನಂಗೆ ಬೇಕು."

"ಮತ್ತೆ ಅವತ್ತು ಹಂಗ್ಯಾಕೆ ಹೇಳಿದ್ದು?"

"ಯಾರು ನಾನಾ? ನಾನು ಹೇಳಿದ್ನಾ?"

"ನೀನಲ್ದಿದ್ರೆ ನಿನ್ನ ಗಂಡ..."

ಮಾತು ದಾರಿ ತಪ್ಪುತ್ತಿದೆ ಅನ್ನಿಸಿ ನಾಗರಾಜ ಸಂಧಾನಕ್ಕೆ ಮುಂದಾಗಿದ್ದ,

"ಇಬ್ರೂ ಸ್ವಲ್ಪ ಸುಮ್ನಿದ್ಬಿಡಿ. ಅಮೃತಾ, ಕೈ ಮುಗೀತೀನಿ, ತಪ್ಪಾಯ್ತು ಕಣೇ. ಸಲಿಗೇಲಿ ಮಾತಾಡ್ಬೇಕಾದ್ರೆ ಬಾಯಿಗೆ ಬಂದಿದ್ದು ಆಡ್ಬಿಡ್ತೇವಿ. 'ಇಂತಾದ್ದು ಆಡ್ಬಾರ್ದು' ಅಂತ ನಾಲಿಗೆಗೆ ಲಗಾಮು ಹಾಕ್ಕಂಡಿರಲ್ಲ. ಎದೆಹಾಲು ಕುಡಿಯೋ ಮಗೂನ ಅಷ್ಟು ಸಲೀಸಾಗಿ ಕೊಟ್ಬಿಡೋಕಾಗುತ್ತಾ? ಯೋಚ್ನೆ ಮಾಡು ನೀನೇ..."

"ನಂಗೆ ಅಂತ್ಲೇ ಇನ್ನೊಂದು ಹೆತ್ತಿದೀರಿ ಅಂದ್ಕೊಂಡಿದ್ದೆ ನಾನು..."

"..."

"ನಂಗೆ ಮೋಸ ಮಾಡ್ಬೇಡ್ರೋ ನಾಗಣ್ಣ. ಸೀತೆ ಬಸುರಿ ಅಂದ್ಕೂಡ್ಲೆ ಎಷ್ಟು ಆಸೆ ಇಟ್ಗಂಡು ಕಾಯ್ತಿದ್ದೆ ಗೊತ್ತಾ?"

"ಇದ್ರಲ್ಲಿ ಮೋಸ ಎಂತದುಂಟು? ಮಗೂನ ಹೆತ್ತು ಕೊಡ್ತೀವಿ ಅಂತ ಕರಾರು ಮಾಡ್ಕಂಡ ಬಾಡಿಗೆ ತಾಯಂದ್ರಿಗೇ ತಾವು ಹೆತ್ತ ಮಗೂನ ಕೊಡೋದು ಕಷ್ಟ ಆಗುತ್ತಂತೆ. ಇದಂತೂ ನಮ್ದೇ ಮಗು..." ಮಾತಾಡಿದ್ದು ಸೀತೆ.

"ಕೊನೇ ಮಾತಾ? ನಿಮಗಿಂತಾ ಚೆನ್ನಾಗಿ ನೋಡ್ಕೋತೀನಿ. ನೀವು ಕೊಡೋದಕ್ಕಿಂತಾ ಒಳ್ಳೇ ಭವಿಷ್ಯ ಕೊಡ್ತೀನಿ..."

"ಬಳ್ಳಿಗೆ ಕಾಯಿ ಭಾರ ಅಲ್ಲ ಕಣೇ. ಅದರ ಹಣೆಗೆ ಹತ್ತಿದ್ದು ಆಗುತ್ತೆ" ಮಾತಾಡುವ ಗುತ್ತಿಗೆ ವಹಿಸಿಕೊಂಡವಳಂತೆ ಉತ್ತರಿಸಿದ್ದಳು ಸೀತೆ.

ನೆಪಕ್ಕೆ ಊಟ ಮಾಡಿ ಎದ್ದಿದ್ದಳು ಅಮೃತಾ. 'ಅದು ಹಾಗಲ್ಲ, ಹೀಗೆ' ಎಂದು ಸಾಂತ್ವನ ಹೇಳಲು